ಕರ್ನಾಟಕ ವಿಧಾನಸಭೆ

ಗುರುವಾರ 29ನೇ ಜುಲೈ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ ರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1. ಅಧ್ಯಕ್ಷರ ಅಪ್ಪಣೆ. ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ನಿವೃತ್ತ ಪೊಲೀಸ್ ಅಧಿಕಾರಿ ಸಂಗ್ರಾಮ್ ಸಿಂಗ್ ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುವ ಬಗ್ಗೆ.

† **ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಬಂದು ತಮ್ಮನ್ನು ಸಂಪರ್ಕ ಮಾಡಿದ್ದೇನೆ. ಇವತ್ತಿನದಿವಸ ಬಜೆಟ್ ಪಾಸ್ ಆಗಬೇಕು ಮತ್ತು ಇದಕ್ಕೆ ಯಾವುದೇ ಕಾರ್ಯಕಲಾಪಗಳು ಅಡ್ಡಿ ಆಗಬಾರದೆಂದು ನಾವು ನಿಮಗೆ ಕೊಟ್ಟಿರತಕ್ಕಂಥ ಭರವಸೆ ನಮಗೆ ಗೊತ್ತಿದೆ. ನೆನ್ನೆದಿವಸ ಸಂಗ್ರಾಮ್ ಸಿಂಗ್‌ರವರು ನೀಡಿರತಕ್ಕಂಥ ಹೇಳಿಕೆ ಮಾನ್ಯ ಉಪ ಮುಖ್ಯಮಂತ್ರಿಯವರಿಗೂ ಕೂಡ ಗೊತ್ತಿರಬಹುದು. ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟೇಟ್ ಮುಂದೆ ನನ್ನೆದಿವಸ ನಿವೃತ್ತ ಪೊಲೀಸ್ ಅಧಿಕಾರಿಯಾದ ಸಂಗ್ರಾಮ್ ಸಿಂಗ್‌ರವರು ತಪ್ಪು ಒಪ್ಪಿಗೆ ಹೇಳಿಕೆ ಇಡೀ ರಾಜ್ಯದ ಜನತೆಯನ್ನು ತಲ್ಲಣಗೊಳಿಸಿದೆ. ಇದರ ಬಗ್ಗೆ ಈ ಹಿಂದೆ ಚರ್ಚೆಯಾಗಿದೆ. ಆ ಚರ್ಚೆಯ ಸಂದರ್ಭದಲ್ಲಿ ತಾವೇನು ಅಪ್ಪಣೆ ಕೊಟ್ಟಿದ್ದೀರೆಂದರೆ, ಈ ಹೇಳಿಕೆ ಕೊಟ್ಟಮೇಲೆ ಯಡಿಯೂರಪ್ಪನವರೇ, ಮಾತನಾಡಿ ಎಂದು ತಾವೇ ಹೇಳಿದ್ದೀರಿ. ಈ ವಿಷಯದ ಬಗ್ಗೆ ನಾನು ಇವತ್ತು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಬಜೆಟ್ ಮೇಲೆ ಎರಡೂ ಕಡೆಯಿರತಕ್ಕಂಥ ಎಲ್ಲಾ ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂಗ್ರಾಮ್ ಸಿಂಗ್‌ರವರು ಕೋರ್ಟ್ ಮುಂದೆ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಬಹಳ ಪ್ರಮುಖವಾದದು. ಪೇಜ್ 16ರಲ್ಲಿ ಸಂಗ್ರಾಮ್ ಸಿಂಗ್ ಏನು ಹೇಳಿಕೆ ನೀಡಿದ್ದಾರೆಂದರೆ, ಸ್ಟಾಂಪಿಟ್ ಅಧಿಕಾರಿಗಳಾದ ರಾಧಮಣಿ ಎಂಬ ಇನ್ಸ್‌ಪೆಕ್ಟರ್ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಡಿ.ವೈ.ಎಸ್.ಪಿ. ಆಗಿರತಕ್ಕಂಥ ಶಶಿಧರ್ ಎಂಬುವರು ನನ್ನ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡರು. ಹಾಗೆ ರೆಕಾರ್ಡ್ ಮಾಡಿಕೊಳ್ಳುವಂಥ ಕಾಲದಲ್ಲಿ ಕ್ರೈಂ ನಂ. 109:1097 ರ ಹೇಳಿಕೆ ಮಾತ್ರ ರೆಕಾರ್ಡ್ ಮಾಡಿಕೊಳ್ಳುತ್ತೇನೆಂದೂ ಮತ್ತು ಯಾವ ಕಾರಣಕ್ಕೂ ನರಹಂತಕ ವೀರಪ್ಪನ್ ಬಗ್ಗೆಯಾಗಲಿ ಅಥವಾ ಇತರೇ ಅಧಿಕಾರಿಗಳ ಬಗ್ಗೆ ಹೇಳುವುದನ್ನು ನಾನು ರೆಕಾರ್ಡ್ ಮಾಡುವುದಿಲ್ಲ ಎಂಬ ಮಾತನ್ನು ಈ ಅಧಿಕಾರಿಗಳು ಹೇಳಿದರೆಂದೂ ಮತ್ತು ಈ ವಿಷಯಗಳನ್ನು ಸ್ಟೇಟ್‌ಮೆಂಟ್ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ರೆಕಾರ್ಡ್ ಮಾಡಿಕೊಳ್ಳಲಿಲ್ಲ ಎನ್ನತಕ್ಕಂಥ ಒಂದು ಆರೋಪವನ್ನು ಅವರು ಮಾಡಿದ್ದಾರೆ. ಮತ್ತೆ ಅವರೇನು ಹೇಳಿದ್ದಾರೆಂದರೆ, ಈ ಹಗರಣದಲ್ಲಿ ಪಾಲ್ಗೊಂಡಿದಂಥ ಯಾರ್ಯಾರು ದೊಡ್ಡ ದೊಡ್ಡ ಕ್ರೈಂಗಳನ್ನು ಮಾಡಿದ್ದಾರೆ ಅವರನ್ನು ಹ್ಯಾಂಗ್ ಮಾಡಬೇಕೆಂದು ಪೊಲೀಸ್ ಅಧಿಕಾರಿಗಳು ಹೇಳಿದರು ಎಂಬ ವಿಷಯ ಸಂಗ್ರಾಮ್

ಸಿಂಗ್ ನೀಡಿರತಕ್ಕಂಥ ಹೇಳಿಕೆಯಲ್ಲಿ ನಾವು ಕೇಳಿದ್ದೇವೆ. ಇದೊಂದು ಪ್ರಮುಖವಾದ ವಿಷಯವಾಗಿದ್ದು, ಮತ್ತೊಂದು ವಿಷಯದ ಬಗ್ಗೆ ಹೇಳುವುದಾದರೆ, ಆತ ನೀಡಿರತಕ್ಕಂಥ ಹೇಳಿಕೆಗಳ ಡೀಟೈಲ್ ಬಗ್ಗೆ ಹೋಗುತ್ತೇನೆ. ಪ್ಯಾರಾ 2, ಪ್ಯಾರಾ 5, ಪ್ಯಾರಾ–6 ಮತ್ತು ಪ್ಯಾರಾ–9 ಹಾಗೂ ಪ್ಯಾರಾ–16 ರಲ್ಲಿ ಸಂಗ್ರಾಮ್ ಸಿಂಗ್ ಹೇಳಿರತಕ್ಕಂಥ ಹೇಳಿಕೆಯನ್ನು ನೋಡಿದಾಗ ಗಾಭರಿ ಉಂಟಾಗುತ್ತದೆ. ಯಾವ ಮಟ್ಟಕ್ಕೆ ಅವತ್ತು ಅಧಿಕಾರ ನಡೆಸಿದಂಥ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಇದ್ದಂಥವರು ಮತ್ತು ಗೃಹ ಸಚಿವರು ಮತ್ತು ಎಲ್ಲರೂ ಅದರಲ್ಲಿ ಇವರು ಕೈಜೋಡಿಸಿದ್ದರು ಎನ್ನುವಂಥ ಒಂದು ಹೇಳಿಕೆ ಒಂದು ರೀತಿಯಾದ ಆಶ್ಚರ್ಯ ಪಡುವಂಥದ್ದು, ಅದಕ್ಕಾಗಿ ನಾನು ಹೇಳುವುದು ಇಷ್ಟೆ, ಅವರು ಹೇಳಿರುವಂಥ ವಿವರಗಳನ್ನೊಳಗೊಂಡಂತೆ ದಯಮಾಡಿ ಸಿಬಿಐ ಅವೆಲ್ಲವನ್ನೂ ತನಿಖೆಗೆ ಒಳಪಡಿಸಬೇಕು. ಸಿಬಿಐಗೆ ತನಿಖೆಗೆ ಒಳಪಡಿಸಿದ ಮೇಲೆ ಅವರು ಯಾರ್ಯಾರನ್ನೂ ಹೆಸರು ಹೇಳಿದ್ದಾರೆ, ನಾನು ಅವರು ಅಪರಾಧಿಗಳು ಎಂದು ಹೇಳುವುದಕ್ಕೆ ಸಿದ್ಧವಿಲ್ಲ. ಆದರೆ ಮೇಲ್ನೋಟಕ್ಕೆ ಕಳೆದ ಎರಡೂವರೆ ವರ್ಷಗಳಿಂದ ಆಗಿರುವಂಥ ಚರ್ಚೆಗಳು ಸಿಕ್ಕಿರುವ ದಾಖಲೆಗಳ ಆಧಾರವನ್ನು ನೋಡಿದಾಗ ಇದೆಲ್ಲವೂ ಸಂಗ್ರಾಮ ಸಿಂಗ್ ಹೇಳಿರುವುದಕ್ಕೆ ಪೂರಕವಾಗಿರುತ್ತದೆ. ಆಶ್ಚರ್ಯಕರವಾದ ಸಂಗತಿ ಎಂದರೆ, ಒಂದು ಸಂದರ್ಭದಲ್ಲಿ ಸಂಗ್ರಾಮ್ ಸಿಂಗ್ 10 ಕೋಟಿ ರೂ.ಗಳನ್ನು ತೆಗೆದುಕೊಂಡು ಹೋಗಿರುವಂಥ ಸಂದರ್ಭದಲ್ಲಿ ಶ್ರೀ ಎಸ್.ಎಂ. ಕೃಷ್ಣರವರು, ಅವತ್ತಿನ ಗೃಹ ಸಚಿವರಾಗಿದ್ದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಅಬ್ದುಲ್‌ಕರೀಂಲಾಲ ತೆಲಗಿಯವರು 10 ಕೋಟಿ ರೂ.ಗಳನ್ನು ಮೊದಲು ಕೊಟ್ಟಂತಹ ಸಂದರ್ಭದಲ್ಲಿ ಇದ್ದರು ಎನ್ನುವಂಥ ಒಂದು ಮಾತನ್ನು ಹೇಳಿದ್ದಾನೆ. ಎರಡನೆಯದಾಗಿ ಈ ಹಣವನ್ನು ಹುಷಾರಾಗಿ ತೆಗೆದುಕೊಂಡು ಹೋಗಿಬಿಟ್ಟು ಅವರಿಗೆ ತಲುಪಿಸಬೇಕು, ಇದುಯಾರಿಗೂ ಗೊತ್ತಾಗಬಾರದೆಂದು ಮಾನ್ಯ ಖರ್ಗೆಯವರಾದ ಗೃಹ ಸಚಿವರು ಹೇಳಿದ್ದಾರೆ ಎನ್ನುವ ಮಾತನ್ನು ಅವನು ಹೇಳಿದ್ದಾನೆ. ಎರಡನೆಯ ಕಂತನ್ನು ತೆಗೆದುಕೊಂಡು ಹೋಗಬೇಕಾದ ಸಂದರ್ಭದಲ್ಲಿ ಅವನು ಹೇಳಿದ್ದಾನೆ, 2000ನೇ ಇಸ್ವಿ ಅಕ್ಟೋಬರ್ 10 ರಂದು ನಾನು ಚೆನ್ನೈಗೆ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದೆ, ಆ ಸಮಯದಲ್ಲಿ ಡಿ.ಕೆ. ಶಿವಕುಮಾರ್‌ವರು ಮತ್ತು ಇತರರು ಎಲ್ಲರೂ ಇದ್ದರು ಎನ್ನುವಂಥದ್ದು ಆಶ್ಚರ್ಯಕರವಾದ ಸಂಗತಿಯಾಗಿದೆ. ಅದಕ್ಕೆ ಶ್ರೀ ಸಿಂಧ್ಯಾರವರೇ, ನಾನು ಏನು ಹೇಳುತ್ತಿದ್ದೇನೆಂದರೆ, ವಿವರಕ್ಕೆ ನಾನು ಹೋಗುತ್ತಿಲ್ಲ. ನಾನು ಅಧ್ಯಕ್ಷರಿಗೆ ನೋಟೀಸ್ ಕೊಟ್ಟಿದ್ದೇನೆ. ಸಿಂಧ್ಯಾರವರೇ, ತಾವು ಬರುವುದಕ್ಕೆ ನಾನು ಏನು ಮಾತನ್ನು ಹೇಳಿರುತ್ತೇನೆಂದರೆ, ಯಾವ ರೂಪದಲ್ಲಿಯಾದರೂ ಇನ್ನೊಂದು ಸಲ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ತಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಾ ಅಥವಾ 'ಜಿರೋ' ಅವರ್ ಕಳುಹಿಸಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಜಿರೊ ಅವರ್‌ನಲ್ಲಿ ಕಳುಹಿಸಿರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಶೂನ್ಯ ವೇಳೆಯಲ್ಲಿಯೂ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು. ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚೆ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ನನ್ನದೇನೂ ತಕರಾರು ಇಲ್ಲ, ಅವರು ವಿರೋಧಪಕ್ಷದ ನಾಯಕರು

ಇರುವುದರಿಂದ ಅವರು ಏನು ಬೇಕಾದರೂ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಲೇ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಪ್ರಾರಂಭ ಮಾಡಿದಾಗ ತಾವು ಇಲ್ಲಿ ಇರಲಿಲ್ಲ, ನಾನು ಏನು ಹೇಳಿದೇನೆಂದರೆ, ಬಹುಶಃ first time in the history ವಿರೋಧಪಕ್ಷ ಯಾವರೀತಿಯಾಗಿ ಕೋ-ಅಪರೇಟ್ ಮಾಡುತ್ತದೆ, ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು ಎನ್ನುವುದರ ಬಗ್ಗೆ ತಮಗೆ ಗೊತ್ತಿದೆ. ನಾವೇನು ಸ್ಪೀಕರ್ ಮುಂದೆ ಹೇಳಿದ್ದೇವೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಯಾವುದೇ ಸಮಯದಲ್ಲಿ ಕೋಪ ಬರದಂತೆ ನಡೆದುಕೊಂಡರೆ ಸಂಸದೀಯ ಸಚಿವರಾಗಿ, ನಾನು ಕುಳಿತಿರುವ ಈ ಕುರ್ಚಿಯಲ್ಲಿ ಮುಂದೆ ಬೇರೆ ಯಾರಾದರೂ ಕುಳಿತರೂ ಅದನ್ನು ಹಗುರವಾಗಿ ಕಾಣದಿದ್ದರೆ ಬಹಳ ಒಳ್ಳೆಯ ರೀತಿಯಲ್ಲಿ ಚರ್ಚೆಗಳಾಗುತ್ತವೆ. ಇದು ವಿರೋಧಪಕ್ಷದ ಸ್ಥಾನದಲ್ಲಿ ಕುಳಿತಿರುವಂಥವರ ಜವಾಬ್ದಾರಿ, ಈ ರೀತಿ ಸಂಗ್ರಾಮ್ ಸಿಂಗ್ ಎನ್ನುವ ನಿವೃತ್ ಪೊಲೀಸ್ ಅಧಿಕಾರಿ 10 ಕೋಟಿ ರೂ.ಗಳಂತೆ ಎರಡು ಕಂತುಗಳಲ್ಲಿ ಕರೀಂಲಾಲ್ ಇದ್ದಾಗ ಒಂದು ಕಂತು, ಉಳಿದ ಸಮಯದಲ್ಲಿ ತೆಗೆದುಕೊಂಡು ಹೋದ ಬಗ್ಗೆ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ: ನನ್ನ ಆಗ್ರಹ ಏನೆಂದರೆ, ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಇವತ್ತು ಈ ಮನೆಯ ಸದಸ್ಯರಾಗಿದ್ದಾರೆ. ವಾಸ್ತವಿಕವಾದ ಸತ್ಯಾಂಶದ ಬಗ್ಗೆ ಏಕೆ ಅವರು ಹೇಳಿಕೆಯನ್ನು ಕೊಡುತ್ತಿಲ್ಲ? ಇವತ್ತು ಅವರು ಈ ಮನೆಗೆ ಬಂದು ಹೇಳಿಕೆಯನ್ನು ಕೊಡಬೇಕಲ್ಲಾ? ನಾಲ್ಕೂವರೆ ವರ್ಷ ಅಧಿಕಾರವನ್ನು ನಡೆಸಿರುವಂಥ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಆವತ್ತಿನ ಗೃಹ ಸಚಿವರು ಇವತ್ತು ಸಚಿವರಾಗಿದ್ದಾರೆ, ಅವರಿಗೆ ನೀವು ಲೀವ್ ಸ್ಯಾಂಕ್ಷನ್ ಮಾಡಿದ್ದೀರಾ; ಅದೂ ಕೂಡ ನನಗೆ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಕುಳಿತುಕೊಳ್ಳುತ್ತೀರಾ? ಇವರು ಈ ಸದನದ ಸದಸ್ಯರ ಹೆಸರು ತೆಗೆದುಕೊಂಡಿದ್ದಾರೆ. ಈ ಸದನದ ಮಂತ್ರಿಗಳ ಹೆಸರನ್ನು ತೆಗೆದುಕೊಂಡಿದ್ದಾರೆ. ಅವರು ಆಡಳಿತ ಪಕ್ಷದ ಕಡೆ ಕುಳಿತುಕೊಂಡಿರತಕ್ಕಂಥವರು ಅಥವಾ ಅವರು ಆ ಕಡೆಯೇ ಕುಳಿತುಕೊಂಡಿರಲಿ, ಯಾವುದೇ ಒಬ್ಬ ಸದಸ್ಯನಿಗೆ ಇವರು ಏನು ಮಾತನಾಡು-ತ್ತಿದ್ದಾರೆಂದರೆ, ನೀವು ಹೇಳುವ ಪ್ರಕಾರ ಆರೋಪದ ಪ್ರಶ್ನೆಯಲ್ಲ, ಸಂಗ್ರಾಮ್ ಸಿಂಗ್ ಹೇಳಿದ್ದಾನೆಂದು ಹೇಳುತ್ತಿದ್ದೀರಿ ಅಂದರೆ ಅದು ಆರೋಪವೇ ಆಗುತ್ತದೆ. ಸಂಗ್ರಾಮ್ ಸಿಂಗ್ ಮತ್ತೇನು ಹೇಳಿದ್ದಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಸಮಯಕ್ಕೆ ಸರಿಯಾಗಿ ವಿಷಯವನ್ನು ತರುವುದು ನನ್ನ ಜವಾಬ್ದಾರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅದರಿಂದಾಗಿ ನಾನು ಹೇಳತಕ್ಕಂಥದ್ದು, ಅವರಿಗೆ ಒಂದು ನೋಟೀಸ್‌ನ್ನು ಕೊಟ್ಟು ಅವರಿಗೂ ಸಹಿತ ವಿವರಣೆಗಳನ್ನು ಏನು ಇದೆ ಎನ್ನವುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕೊಟ್ಟು, ಅದು ಆದಮೇಲೆ ಇದಕ್ಕೆ ತಾವು ಒಂದು ಅವಕಾಶವನ್ನು ಕೊಟ್ಟರೆ ನಮ್ಮದೇನೂ ತಕರಾರು ಇಲ್ಲ. ಅವರಿಗೆ ಒಂದು ನೋಟೀಸ್‌ಕೊಟ್ಟು ಇದರಲ್ಲಿ ಅವರೂ ಕೂಡ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಕೊಡಬೇಕಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, 100 ಪರ್ಸೆಂಟ್ ಇದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೋಸ್ಕರವಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ಈ ಗುರುತರವಾದ ಒಂದು ಆರೋಪವನ್ನು ಸಂಗ್ರಾಮ್ ಸಿಂಗ್ ಏನು ಮಾಡಿದ್ದಾರೆ, ನನ್ನದು ಇಷ್ಟೆ, ಒಂದು ಕ್ಷಣ ತಡಮಾಡದೆ ಸಿಬಿಐ ಅಧಿಕಾರಿಗಳು ಯಾರ್ಯಾರ ಹೆಸರುಗಳನ್ನು ಅವರು ಹೇಳಿದ್ದಾರೊ ಅವರನ್ನು ತನಿಖೆಗೆ ಒಳಪಡಿಸಬೇಕು. ನಿಷ್ಪಕ್ಷಪಾತವಾದ ತನಿಖೆಯಾಗಬೇಕು ಅಂದರೆ ಈಗ ಹಾಲಿ ಸಚಿವರು ಯಾರಿದ್ದಾರೆ, ಅವರು ರಾಜೀನಾಮೆ ಕೊಟ್ಟು ನಿಷ್ಪಕ್ಷಪಾತವಾದ ತನಿಖೆಗೆ ಅವಕಾಶವನ್ನು ಮಾಡಿಕೊಡಬೇಕು. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ಬಗ್ಗೆ ನಾನು ಗೌರವವನ್ನು ಇಟ್ಟುಕೊಂಡಿದ್ದೇನೆ. ನಾಲ್ಕೂವರೆ ವರ್ಷ ಅವರು ಕೆಲಸ ಮಾಡಿವಾಗ ಆಗ ನಾನು ವಿಧಾನಪರಿಷತ್ ಸದಸ್ಯನಾಗಿದ್ದೆ, ಅವರ ಬಗ್ಗೆ ಈ ತರಹದ ಗುರುತರವಾದ ಆರೋಪ ಬಂದಾಗ ನಾಡಿನ ಜನ ಅವರನ್ನು ಸಂಶಯದಿಂದ ನೋಡಬಾರದೆಂದು ಆಗುವುದಾದರೆ ಅವರು ಒಂದು ಹೇಳಿಕೆಯನ್ನು ಕೊಡುವಂಥ ಒಂದು ಜವಾಬ್ದಾರಿ ಅವರದ್ದಾಗಿದೆ. ಆದರೆ ಸದನ ಪ್ರಾರಂಭ-ವಾದಾಗಿನಿಂದ ಅವರು ತಮ್ಮ ಬೇರೆ ಬೇರೆ ಕಾರಣಗಳಿಂದ ಬರದೇ ಇರಬಹುದು, ಅವರು ಈ ಮನೆಗೆ ಬಂದು ಉತ್ತರವನ್ನು ಕೊಡದಿದ್ದರೆ ನಾವು ಇಲ್ಲಿ ಚರ್ಚೆಯನ್ನು ಮಾಡಬೇಕಲ್ಲವೆ? ನೋಟೀಸ್‌ಕೊಟ್ಟು ಚರ್ಚೆಯನ್ನು ಮಾಡೋಣ. ಮಾಜಿ ಮುಖ್ಯಮಂತ್ರಿಗಳ ಅಥವಾ ಇನ್ನಾರೋ ವ್ಯಕ್ತಿಗಳ ಬಗ್ಗೆ ಚರ್ಚೆ...

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ತಾವು ಈಗ ಏನು ಮಾತನಾಡುತ್ತಿದ್ದೀರಿ, This itself can be treated as a notice. ಈಗ ಏನೂ ಚರ್ಚೆಗೆ ತೆಗೆದುಕೊಂಡಿಲ್ಲ, ಇದನ್ನೇ ಅಧ್ಯಕ್ಷರು ನೋಟೀಸ್ ಎಂದು ಟ್ರೀಟ್ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಜೆ.ಸಿ. ಮಾಧುಸ್ವಾಮಿಯವರೆ, ತಾವೂ ಕೂಡ ಅಸೆಂಬ್ಲಿಗೆ ಮೂರನೆಯ ಸಲ ಗೆಲ್ಲುತ್ತಿರುವುದು, ಒಬ್ಬ ಮೆಂಬರ್‌ಗೆ ಏನು ಚಾರ್ಜಿಸ್ ಇದೆ ಎನ್ನವುದರ ಬಗ್ಗೆ ನೋಟೀಸ್‌ನ್ನು ಕೊಡದೆ, ಅಧ್ಯಕ್ಷರೇ ನೋಟೀಸ್ ಕೊಡಬೇಕೆಂದು ಅಂದರೆ ಹೇಗಾಗುತ್ತದೆ? You are a senior member of this House.

ಗೊಂದಲ

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ನಾನು ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ. ಅಗತ್ಯವಿದ್ದರೆ ಚರ್ಚೆಗೆ ಯಾವುದೇ ಒಂದು ರೂಪದಿಂದ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಇಂತಹ ಒಂದು ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ, that can be treated as a notice.

Sri P.G.R. Sindhia : When there are charges against a minister or against a member, he has to be given a notice. He has to come prepared.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ವಿರೋಧಪಕ್ಷದ ನಾಯಕರು ಡೀಟೈಲ್‌ಗೆ ಹೋಗಿರುವುದಿಲ್ಲ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನೋಟೀಸ್ ಕೊಟ್ಟಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಏನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಅವರು ಈ ಸದನದ ಸದಸ್ಯರೇ ಆಗಿರುವುದರಿಂದ ಇದು ಅವರ ಗಮನಕ್ಕೆ ಬರಲೇಬೇಕು. ಸಪರೇಟಾಗಿ ನೋಟೀಸ್ ಕೊಡುವ ಅಗತ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಕೊಡಬೇಕೆಂದರೆ ನೋಟೀಸ್ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಾನು ಹೊಸದಾಗಿ ಏನೂ ಆರೋಪವನ್ನು ಮಾಡುತ್ತಿಲ್ಲ, ನಿನ್ನೆ ದಿವಸ ಮ್ಯಾಜಿಸ್ಟೇಟ್ ಮುಂದೆ ಲಿಖಿತ ಮೂಲಕ ತಪ್ಪೊಪ್ಪಿಗೆ ಪತ್ರವನ್ನು ಸಂಗ್ರಾಮ್ ಸಿಂಗ್ ಏನು ಬರೆದುಕೊಟ್ಟಿದ್ದಾರೆ, ಅದರ ದಾಖಲೆಗಳು ಇವತ್ತು ಇಡೀ ಈ ಸದನದ ಸದಸ್ಯರಿಗೆ ತಿಳಿದಿರುವಂಥದ್ದು, ಪತ್ರಿಕೆಯಲ್ಲಿ ಕೂಡ ಜಗಜ್ಜಾಹೀರವಾಗಿರುವಂಥದ್ದು. ಇದು ಇಷ್ಟೇ ಸರ್.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ನೀವು ಪ್ರಸ್ತಾಪವನ್ನು ಮಾಡಿದ್ದೀರಿ ಬಜೆಟ್ ಮೇಲೆ ಚರ್ಚೆ ಮತ್ತು ಉತ್ತರವಿದೆ, ಸರ್ಕಾರದ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಿ ನಂತರ ಅಗತ್ಯಬಿದ್ದರೆ, ತಾವು ನೋಟೀಸ್‌ನ್ನು ಕೊಟ್ಟರೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಯಾರ್ಯಾರ ಹೆಸರು ಉಲ್ಲೇಖವಾಗಿದೆಯೋ ಇದರ ಬಗ್ಗೆ ಒಂದು ಸಿಬಿಐ ತನಿಖೆಯಾಗಲಿ, ಸರ್ಕಾರ ಪ್ರಾಮಾಣಿಕವಾಗಿದ್ದರೆ ಮುಂದೆ ಬರಲಿ. ಮಾನ್ಯ ಮಂತ್ರಿಗಳ ಹೆಸರನ್ನು ಹೇಳಿದ್ದಾರೆ, ಅವರ ಬಗ್ಗೆ ತನಿಖೆ ಮಾಡಿಸುವುದಕ್ಕೆ ನಾವು ಸಿದ್ಧರಿದ್ದೇವೆಂದು ಸರ್ಕಾರದವರು ಹೇಳಲಿ.

ಅಧ್ಯಕ್ಷರು : ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆ ಅದನ್ನು ಕೇಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ವಿಷಯ ಪ್ರಸ್ತಾಪವಾಗಬೇಕೆಂದು ಚರ್ಚೆಗೆ ಎತ್ತಿದ್ದಾರೆ, ಇದೆಲ್ಲದರ ಬಗ್ಗೆ ನನಗೊಂದು ಅರ್ಥವಾಗುತ್ತಿಲ್ಲ, ಸಿಬಿಐ ದವರೇ ಎನ್‌ಕ್ವಾಯರಿ ಮಾಡತಕ್ಕಂಥವರು, ಸಿಬಿಐ ಒಂದು ಸ್ವತಂತ್ರವಾಗಿರತಕ್ಕಂಥ ಸಂಸ್ಥೆ. ಇದು ಕೇಂದ್ರ ಸರ್ಕಾರದ ಒಂದು ವ್ಯಾಪ್ತಿಯಲ್ಲಿ ಬರತಕ್ಕಂಥ ಸಂಸ್ಥೆ. ಆ ಸಂಸ್ಥೆಗೆ ಹೀಗೆಯೇ ನಿರ್ದೇಶನ ಕೊಟ್ಟು ಎನ್‌ಕ್ವಾಯರಿ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಎನ್‌ಕ್ವಾಯರಿ ಮಾಡತಕ್ಕಂಥ ಸ್ಟೇಜ್‌ನಲ್ಲಿ ಡಿಟೇಲ್ಸ್‌ಗಳನ್ನೂ ಸಹ ನಮಗೆ ಹೇಳುವು–ದಕ್ಕಾಗುವುದಿಲ್ಲ. It amounts to interference in their enquiry. ನಾವು ಸಿಒಡಿ ಎನ್‌ಕ್ವಾಯರಿ ಮಾಡಿಸತಕ್ಕಂಥ ಸಂದರ್ಭದಲ್ಲಿಯೇ ನಾನೂ ಕೂಡ ಹೋಮ್ ಮಿನಿಸ್ಟರ್ ಆಗಿ ಕೆಲಸ ಮಾಡಿರತಕ್ಕಂಥವನು, we keep a distance from the investigation officers. ಯಾರು ಇನ್‌ವೆಸ್ಟಿಗೇಶನ್ಸ್ ಆಫೀಸರ್ಸ್ ಇರುತ್ತಾರೆ, ಅವರೊಂದಿಗೆ ನಾವು ಮಾತನಾಡುವುದಕ್ಕೆ ಬಯಸುವುದಿಲ್ಲ. ಮಾತನಾಡಲೂಬಾರದು. ಸ್ವತಂತ್ರವಾಗಿ ಎನ್‌ಕ್ವಾಯರಿ ಆಗಬೇಕು. ಸತ್ಯ ಹೊರಗಡೆ ಬರಬೇಕೆಂದರೆ, ಸಿಒಡಿ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಒಂದು ಸಂಸ್ಥೆ, ಸಿಬಿಐ, ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಒಂದು ವ್ಯವಸ್ಥೆ. ಅವರೂ ವಿಚಾರಣೆಯನ್ನು ಮಾಡುತ್ತಾರೆ, ಅವರು ವಿಚಾರಣೆಯನ್ನು ಮಾಡಬೇಕೆಂದು ಹೇಳಿಬಿಟ್ಟು ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಕೊಟ್ಟಿದೆ,

ಸುಪ್ರೀಂಕೋರ್ಟ್ ಇದರ ಮಾನಿಟರ್ ಅನ್ನು ಮಾಡುತ್ತಿದೆ, ಇಂತಹ ಸನ್ನಿವೇಶದಲ್ಲಿ ಒಬ್ಬ ಆರೋಪಿ ಕೊಟ್ಟಿರತಕ್ಕಂಥ ಹೇಳಿಕೆಯು ಆಧಾರದ ಮೇಲೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಮಾನ್ಯ ಯಡಿಯೂರಪ್ಪನವರೇ, ತಾವು ಹಿರಿಯರು, ಅನುಭವಸ್ಥರು, ವಿರೋಧ ಪಕ್ಷದ ನಾಯಕರು, ತಮ್ಮ ಕಡೆ ಬಹಳ ದೊಡ್ಡ ಸಂಖ್ಯೆಯ ಸದಸ್ಯರಿದ್ದಾರೆ, ದಯಮಾಡಿ ತಾವು ನಮ್ಮ ಮಾತನ್ನು ಕೇಳಿ, ಇವರು ಏನು ಹೇಳುತ್ತಾರೆ, ಅವರು ಯಾರ್ಯಾರದ್ದೋ ಹೆಸರನ್ನು ಹೇಳಿದ್ದಾರೆ, ಅವರ ಬಗ್ಗೆ ಎಲ್ಲಾ ಎನ್‌ಕ್ವಾಯರಿ ಮಾಡಿಸಿ ಎಂದು ಯಾರು ಎನ್‌ಕ್ವಾಯರಿ ಮಾತಕ್ಕಂಥವರು? When the CBI enquiry is going on, can the Karnataka State Police again pull them out? It is for the CBI. ಸಿಬಿಐ ನವರು ಯಾರ್ಯಾರ ಹೆಸರಿನ ಹೇಳಿಕೆಯನ್ನು ಕೊಡುತ್ತಾರೆ, ಏನು ಮಾಡುತ್ತಾರೆ, ಯಾವರೀತಿಯಾದ ವಿಚಾರಣೆಯಾಗಬೇಕು ಎನ್ನವುದು, ನಾನು ಮುಗಿಸಿಯೇ ಇಲ್ಲ ಸರ್. ಸಿಬಿಐ ನವರು ಯಾವರೀತಿಯಾಗಿ ಎನ್‌ಕ್ವಾಯರಿ ಮಾಡಬೇಕು ಎನ್ನುವುದರ ಬಗ್ಗೆ ಗೈಡ್‌ಲೈನ್ಸ್‌ನ್ನು ನಾವು ಫಿಕ್ಸ್ ಮಾಡುವುದಕ್ಕಾಗುವುದಿಲ್ಲ, ಯಾವ ಒಬ್ಬ ಆರೋಪಿ ಕೊಟ್ಟಿರತಕ್ಕಂಥ ಹೇಳಿಕೆ ಏನಿದೆ, ಆ ಹೇಳಿಕೆಯ ಆಧಾರದ ಮೇಲೆ ಅವರು ವಿಚಾರಣೆಯನ್ನು ಮುಂದುವರೆಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅವರು ಏನೇನು ಹೇಳಿಕೆಗಳನ್ನು ಕೊಡುತ್ತಾರೆ ಅದರ ಆಧಾರದ ಮೇಲೆ ಸಾಕ್ಷಿ, ಪುರಾವೆಗಳು ಮತ್ತೊಂದು ಮಗದೊಂದು ಇದನ್ನೆಲ್ಲವನ್ನೂ ಅವರು ಮಾಡಿಕೊಂಡು ಹೋಗುತ್ತಾರೆ. ಆದ್ದರಿಂದ ಒಂದು ಸಾರಿ ಇದರ ಬಗ್ಗೆ ಇದೇ ಅಧಿವೇಶನದಲ್ಲಿ ಚರ್ಚೆಯಾಗಿದೆ. ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆ ಚರ್ಚೆಯಾದ ನಂತರ ಮತ್ತೊಂದು ಸಲ ಅದೇ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದರೆ ನನಗೇನೂ ಸಮಂಜಸವಾಗಿ ಕಾಣುವುದಿಲ್ಲ. ತಾವು ಅವಕಾಶವನ್ನು ಮಾಡಿಕೊಡಬಾರದೆಂದು ನಾನು ಈ ಸಂದರ್ಭದಲ್ಲಿ, ಆದಕ್ಕೆ ಕಾನೂನಿನ ಪ್ರಕಾರವಾಗಿ ಅವಕಾಶವಿಲ್ಲವೆನ್ನತಕ್ಕಂಥದ್ದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುತ್ತೇನೆ, ಈ ಮನೆಯಲ್ಲಿ ನಾನೇ ಒಂದು ನಿರ್ಣಯವನ್ನು ತರುತ್ತೇನೆ, ಯಾರ್ಯಾರ ಹೆಸರನ್ನು ಸಂಗ್ರಾಮ್ ಸಿಂಗ್ ಹೇಳಿದ್ದಾರೋ ಅವರೆಲ್ಲರನ್ನೂ ಸಿಬಿಐ ತನಿಖೆಗೆ ಒಳಪಡಿಸಬೇಕು, ಸುಪ್ರೀಂ ಕೋರ್ಟ್, ಈ ತನಿಖೆಗೆ ಒಂದು ಆದೇಶವನ್ನು ಮಾಡಿದೆ, ಆದ್ದರಿಂದ ಕೆಲವು ನ್ಯಾಯಾಧೀಶರನ್ನು ಸುಪ್ರೀಂ ಕೋರ್ಟ್ ಇದರ ಸೂಪರವೈಸರ್ ಮಾಡುವುದಕ್ಕೆ ಈ ತನಿಖೆ ಸರಿಯಾದ ರೀತಿಯಲ್ಲಿ ನಿಷ್ಪಕ್ಷಪಾತವಾಗುವುದಕ್ಕೆ ಸುಪ್ರೀಂ ಕೋರ್ಟಿನ 3–4 ಜನ ನ್ಯಾಯಾಧೀಶರನ್ನು ಇದಕ್ಕೆ ಅಪಾಯಿಂಟ್ ಮಾಡಿ ಇದಕ್ಕೆ ಸಹಕರಿಸುವುದಕ್ಕೆ ಪ್ರಾಮಾಣಿಕವಾಗಿ ಆಗುತ್ತದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೋಸ್ಕರ ಆದೇಶವನ್ನು ಮಾಡಬೇಕೆಂದು ಹೇಳಿ ನಾನು ಒಂದು ನಿರ್ಣಯವನ್ನು ತರುತ್ತೇನೆ. ಇದು ಪಾಸಾಗಲಿ, ಅದಕ್ಕೆ ಯಾರು ಪರ ಅಥವಾ ವಿರೋಧ ಇರುತ್ತಾರೋ ಅದನ್ನು ನೋಡೋಣ. ನಾನು ಹಿರಿಯ ಸಚಿವರಾದ ಶ್ರೀ ಸಿಂಧ್ಯಾರವರಿಂದ ನಿರೀಕ್ಷೆ ಮಾಡುವುದು ಇಷ್ಟೇ, ನಾವು ಯಾವುದೇ ಹೊಸ ಆರೋಪವನ್ನು ಮಾಡುತ್ತಿಲ್ಲ. ಕಳೆದ ಎರಡೂವರೆ ವರ್ಷಗಳಿಂದ ನಾನೇನು ಆರೋಪಗಳನ್ನು ಮಾಡಿದ್ದೆ, ಅದಕ್ಕೆಲ್ಲಾ ಸಾಕ್ಷಾಧಾರಗಳು ಸಿಗುತ್ತಿದೆ. ನೀವು ಸರಿ ತಪ್ಪಿನ ಬಗ್ಗೆ ಹೇಳದೆಯೇ ಸಿಬಿಐ ತನಿಖೆಯೂ ಅಂತಿಮವಾದ ತೀರ್ಮಾನವಾದ ಮೇಲೆ ಆಗುತ್ತದೆ. ಆದರೆ ಅಂತಿಮವಾಗಿ

ನಿಷ್ಪಕ್ಷಪಾತವಾದ ತನಿಖೆಯಾಗಬೇಕಾದರೆ ಜವಾಬ್ದಾರಿಯಿರುವವರು ಸಚಿವರಾಗಿದ್ದರೆ ಅದು ನಿಷ್ಪಕ್ಷಪಾತವಾದ ತನಿಖೆಯಾಗುತ್ತದೆಯೇ? ನಿಷ್ಪಕ್ಷಪಾತವಾದ ತನಿಖೆಯಾಗುವವರೆಗೂ ನಾನು ಯಾವುದೇ ಕಾರಣಕ್ಕೂ ಮಾನ್ಯ ಧರ್ಮಸಿಂಗ್‌ರವರಿಗೆ ಧರ್ಮಸಂಕಟಕ್ಕೆ ನಾನು ಸಿಕ್ಕಿಸುವುದಿಲ್ಲ. ಅಲ್ಲಿಯವರೆವಿಗೂ ನಾನು ಹೊರಗಡೆ ಇರುತ್ತೇನೆಯೆಂದು ವಾಲೆಂಟರಿಯಾಗಿ ಹೇಳಬೇಕಾಗುತ್ತದೆ. ಮತ್ತೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಎಸ್.ಎಂ. ಕೃಷ್ಣರವರು ಈ ಮನೆಗೆ ಬಂದು ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಇಲ್ಲವೆಂದರೆ ರಾಜ್ಯದ ಜನತೆ ಯಾವುದು ಸರಿ ಮತ್ತು ತಪ್ಪು ಎಂದು ತೀರ್ಮಾನವನ್ನು ಮಾಡುತ್ತಾರೆ. ಇವರೆಲ್ಲರನ್ನೂ ಸಿಬಿಐಗೆ ಸಮಗ್ರವಾದ ತನಿಖೆಗೆ ಒಳಪಡಿಸಬೇಕು, ಸಂಗ್ರಾಮ್ ಸಿಂಗ್ ಹೇಳಿಕೆಯ ಬಗ್ಗೆ ನಾನು ಶೂನ್ಯವೇಳೆಯಲ್ಲಿ ತೆಗೆದುಕೊಂಡಿದ್ದೇನೆ. ನಾನು ನಿಮ್ಮ ಹತ್ತಿರ ಮಾತನಾಡಿದ್ದೇನೆ, ನಾನು ವಿರೋಧಪಕ್ಷದ ನಾಯಕನಾಗಿ ಮಾತನಾಡುವ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಬಹುದಾಗಿತ್ತು. ಇಲ್ಲಿ ಪ್ರಮುಖವಾದಂಥ ಹತ್ತಾರು ಜನ ಸದಸ್ಯರು 10–10 ನಿಮಿಷಗಳ ಕಾಲ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಬಗ್ಗೆ ಅವಕಾಶ ಬೇಕೆಂದರೆ ನೀವೇ ನಮ್ಮ ನಿಯಮಾವಳಿಗಳ ಪ್ರಕಾರ ಕೊಶ್ಚನ್ ಹವರ್‌ನ್ನು ರದ್ದು ಮಾಡಬಾರದು ಎನ್ನುವ ಬಗ್ಗೆ ನಿನ್ನೆ ಮತ್ತು ಇವತ್ತು ರದ್ದು ಮಾಡಿದ್ದೀರಿ, ನಂತರ ಆಮೇಲೆ ತೆಗೆದುಕೊಳ್ಳೋಣವೆಂದಿದ್ದೀರಿ. ಇಷ್ಟು ಮಹತ್ವವನ್ನು ಕೊಟ್ಟಾಗ ಇಡೀ ರಾಜ್ಯದ ಜನರು ಇದರ ಬಗ್ಗೆ ಚಿಂತಿತರಾಗಿರುವಂತಹ ಸಂದರ್ಭದಲ್ಲಿ, ನಾವು ನಂಬಿದಂತಹ ನಾಲ್ಕೂವರೆ ವರ್ಷಗಳ ಕಾಲ ಅಧಿಕಾರವನ್ನು ಮಾಡಿದಂತಹ ಸರ್ಕಾರ ಈ ರೀತಿಯ ದೇಶ ದ್ರೋಹಿಯ ಚಟುವಟಿಕೆಗಳಲ್ಲಿ ಕೈಹಾಕಿದ್ದರು, ಹಣಕಾಸಿನ ನೆರವನ್ನು ಕೊಡುವುದರ ಬಗ್ಗೆ ವ್ಯವಸ್ಥೆಯನ್ನು ಮಾಡಿದ್ದರು, ಕರೀಂಲಾಲ್‌ನಿಂದ 10 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ತಲುಪಿಸಿದರು, ಇಲ್ಲಿಯವರೆವಿಗೆ ಏನೇನು ಅವಾಂತರಗಳು ಆಗಿದೆ, ಡಾ. ರಾಜ್‌ಕುಮಾರ್‌ರವರ ಬಿಡುಗಡೆಯ ನೆಪದಲ್ಲಿ ನೂರಾರು ಕೋಟಿ ರೂಪಾಯಿಗಳು ಸಂಗ್ರಹವಾಗಿದೆ, ಆ ಹಣವು ಅಡವಿಪಾಲಾಗಿದೆ. ಇದರ ಬಗ್ಗೆ ಸಮಗ್ರವಾದ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಗೃಹಖಾತೆ ಇದೆ. ಅವರಿಂದ ಒಂದು ಸಾರಿ ಹೇಳಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಹೇಳಿರತಕ್ಕಂತಹದ್ದು ವಿವರವಾಗಿ ಏನೇನು ಬೇಕು, ಅವರು ಹೇಳಿಕೆಗಳನ್ನು ಕೊಟ್ಟಿದ್ದಾರೆನ್ನತಕ್ಕಂತಹದ್ದನ್ನು ಪತ್ರಿಕೆಗಳು ಪ್ರಕಟ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಯಡಿಯೂರಪ್ಪನವರೂ ಸಹಿತ ಹೇಳಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. I am not disputing his right.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ರೀತಿಯಾಗಿ ಚರ್ಚೆಯಾಗಬೇಕೋ ಆ ಚೌಕಟ್ಟನ್ನು ತಾವು ನಿರ್ಧಾರ ಮಾಡಿ. ನಾನು ಪ್ರಸ್ತಾಪ ಮಾಡುವುದು ನನ್ನ ಕರ್ತವ್ಯ ; ನಾನು ಮಾಡಿದ್ದೇನೆ. ತಾವು ಸಮಯವನ್ನು ನಿಗದಿಮಾಡಿ ಬೇರೆ ಯಾವ ತರಹ ರೂಪದಲ್ಲಿ ಬೇಕಾದರೂ ತರಬಹುದು. ಆ ತರಹ ಚರ್ಚೆ ಮಾಡೋಣ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಮುಖ್ಯಮಂತ್ರಿಗಳು.....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದರ ಬಗ್ಗೆ ನನ್ನದೇನೂ ತಕರಾರು ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದೂ ತಕರಾರು ಇಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ, ಅನಂತರ ತಾವು ಯಾವ ತರಹ ಕೇಳುತ್ತೀರಿ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು ಸ್ವಾಮಿ. ತಾವು ಹೇಳಿದರೂ ಕೂಡ..

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಲುವಳಿ ಸೂಚನೆಯ ಮೂಲಕ, ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಹೇಳಿರುವುದನ್ನು ನಾನು ಕೇಳಿದ್ದೇನೆ. ನಾವು ಹೇಳುವುದನ್ನು ತಾವು ಸ್ವಲ್ಪ ಕೇಳಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನ್ಯಾಯವಾಗಿ ನೀವು ಮಧ್ಯೆ ಮಾಡತನಾಡಲೇ ಬಾರದು. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಅಲ್ಲಿ ಕುಳಿತುಕೊಂಡು ಇಲ್ಲಿ ಕುಳಿತುಕೊಂಡು ಏನು ಮಾತನಾಡಿದ್ದೀರಿ ಎಂಬ ವಿವರವನ್ನು ನಾನು ಕೊಡುತ್ತೇನೆ. ನೀವು ಯಾವ ಮಟ್ಟಕ್ಕೆ ತನಿಖೆಯ ಸಂದರ್ಭದಲ್ಲಿ ಹೋಗಿದ್ದೀರಿ ಎಂಬ ಬಗ್ಗೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಅಲ್ಲಿ ಕುಳಿತುಕೊಂಡು ಏನೇನು ಮಾತನಾಡಿದ್ದೇನೆ, ಅದೇ ಇಲ್ಲಿ ರಿಪೀಟ್ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೋ ಸಂದಿಗ್ಧಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಮಾತನಾಡುತ್ತಿದ್ದೀರಿ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆ ರೀತಿ ಏನೂ ಇಲ್ಲ. ನಾನು ಯಾರ ಹಂಗಲ್ಲೂ ಇಲ್ಲ. ಹಂಗೂ ಇಲ್ಲ ಯಾರ ಮುಲಾಜು ಕೂಡ ಇಲ್ಲ.

ಅಧ್ಯಕ್ಷರು : ಇಲ್ಲಿ (ಆಡಳಿತ ಪಕ್ಷ)ದಲ್ಲಿ ಕುಳಿತುಕೊಂಡು ಕೆಲವು ಮಾತನಾಡಬೇಕಾಗುತ್ತದೆ. ಈ ಜಾಗದಲ್ಲಿ ಕುಳಿತುಕೊಂಡು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ. ಅದು ಪ್ರಜಾಪ್ರಭುತ್ವದಲ್ಲಿ ಇದ್ದಿದ್ದೇ. ಅವರು ಏನು ಹೇಳುತ್ತಾರೆ ಕೇಳೋಣ. ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇದು ಅವರ ಪ್ರಕಾರ ಮಹತ್ತರವಾದಂತಹ ವಿಚಾರವಾಗಿದೆ. ಮಾನ್ಯ ಸದಸ್ಯರುಗಳ ಪ್ರಕಾರವಾಗಿ ಮಹತ್ತರವಾದ ವಿಚಾರವಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ತಮ್ಮ ಪ್ರಕಾರವಾಗಿಯೂ ಕೂಡ ಅದು ಮಹತ್ತರವಾದುದ್ದೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನಗೆ ಒಂದೊಂದು ವಾಕ್ಯವನ್ನೂ ಕೂಡ ಹೇಳುವುದಕ್ಕೆ ಬಿಡುತ್ತಿಲ್ಲ, ನೋಡಿ ಮಾನ್ಯ ಅಧ್ಯಕ್ಷರೆ. ನನಗೆ ಎಷ್ಟೊಂದು ತೊಂದರೆಯನ್ನು ಕೊಡುತ್ತಿದ್ದಾರೆ. ಇವರುಗಳೆಲ್ಲರೂ ನನ್ನ ಸ್ನೇಹಿತರು ಎಂದು ಹೇಳಿಕೊಳ್ಳುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಿಂಧ್ಯಾರವರು ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ನಮಗೆ ಅಡ್ಡಗಾಲನ್ನು ಹಾಕುತ್ತಿದ್ದಾರೆ, ಮತ್ತು ತೊಡರುಗಾಲನ್ನು ಹಾಕುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ಕುಳಿತುಕೊಂಡರೆ ಮುಜುಗರವಾಗುತ್ತದೆಂದು ನಮ್ಮ ಕಾಂಗ್ರೆಸ್‌ನ ಯಾವ ಸಚಿವರೂ ಕೂಡ ಬಂದಿಲ್ಲ. ನೀವು ಏತಕ್ಕಾಗಿ ಈ ಕಷ್ಟವನ್ನು ತೆಗೆದುಕೊಳ್ಳುತ್ತಿದ್ದೀರಿ ; ನಿಮ್ಮ ಪರಿಸ್ಥಿತಿಯನ್ನು ನೋಡಿದರೆ ಅಯ್ಯೋ ಪಾಪ ಎನ್ನಿಸುತ್ತದೆ. ನೀವು ಅವರನ್ನು ಡಿಫೆಂಡ್ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂತಲ್ಲಾ..

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕಾಂಗ್ರೆಸ್ಸಿನ ಮಂತ್ರಿಗಳೆಂದು ಯಾರೂ ಇಲ್ಲ. ಜಾತ್ಯಾತೀತ ಜನತಾ ದಳದ ಮಂತ್ರಿಗಳೆಂದು ಕೂಡ ಯಾರೂ ಇಲ್ಲ. ನಾವೆಲ್ಲರೂ ಸಮ್ಮಿಶ್ರ ಸರ್ಕಾರದ ಶ್ರೀ ಧರ್ಮಸಿಂಗ್ ರವರ ನೇತೃತ್ವದಲ್ಲಿ ಇರತಕ್ಕಂತಹ ಸರ್ಕಾರದವರು ಮಂತ್ರಿಗಳು ನಾವು. For this House, our Political affiliation is outside this House, not here. ಇದು ಒಂದು ಮೊದಲನೆಯದಾಗಿ ಇದು ನ್ಯಾಯಾಲಯದ ಮುಂದೆ ಇರತಕ್ಕಂತಹ ವಿಚಾರ. ಇದು ಬರೀ ನ್ಯಾಯಾಲಯವಲ್ಲ, ಸಿಬಿಐನವರು ಎನ್‌ಕ್ವಯರಿ ಮಾಡುತ್ತಿದ್ದಾರೆ. ಮತ್ತೆ ಇದನ್ನು ಸುಪ್ರೀಂ ಕೋರ್ಟಿನ ಡೈರೆಕ್ಷನ್ ಮೇಲೆ ಸುಪ್ರೀಂ ಕೋರ್ಟ್ ನವರು ಮಾನಿಟರ್ ಮಾಡುತ್ತಿದ್ದಾರೆ. ಇಲ್ಲಿ ಆಗತಕ್ಕಂತಹ ಪ್ರತಿಯೊಂದು ವಿಚಾರದ ಬಗ್ಗೆಯೂ ಕೂಡ ಸುಪ್ರೀಂ ಕೋರ್ಟ್ ಗಮನಿಸಿಸುತ್ತದೆ, ಇಂತಹ ವಿಚಾರದಲ್ಲಿ ನ್ಯಾಯಾಲಯದಲ್ಲಿ ಇರತಕ್ಕಂಥಹದ್ದು ಒಂದು ಭಾಗವಾದರೆ, ಸಿಬಿಐನವರು ಎನ್‌ಕ್ವಯರಿ ಮಾಡುತ್ತಿರುವುದು ಇನ್ನೊಂದು ಭಾಗವಾಗಿದೆ. ಈ ಎರಡೂ ಇರುವಾಗ ಈ ಸದನದಲ್ಲಿ ಎಷ್ಟರಮಟ್ಟಿಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಬಹುದು ಎನ್ನುವುದನ್ನು ತಾವೇ ವಿಚಾರವನ್ನು ಮಾಡಬೇಕು. ಮಾನ್ಯ ಎಸ್.ಎಂ. ಕೃಷ್ಣರವರಾಗಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಈ ಸದನದ ಗೌರವಾನ್ವಿತ ಸದಸ್ಯರಾಗಿದ್ದಾರೆ. ಅವರುಗಳು ಇಲ್ಲಿ ಬಂದು ಕೋರ್ಟಿನ ಮುಂದೆ ಹಾಜರಾಗುವ ಹಾಗೆ ಇಲ್ಲಿ ಹಾಜರಾಗಿ ಹೇಳಿಕೆಗಳನ್ನು ಈ ವಿಚಾರದಲ್ಲಿ ಕೊಡುವುದಕ್ಕಾಗುತ್ತದೆಯೇ? ಆ ರೀತಿಯಾಗಿ ಕೊಡುವುದಕ್ಕಾಗುವುದಿಲ್ಲ. ಅದರಿಂದಾಗಿ ಸಿಬಿಐಗೆ ಸಿಂಧ್ಯಾರವರಾಗಲಿ, ಮತ್ತೊಬ್ಬರಾಗಲಿ, ಇಂತಿಂಥವರನ್ನು ಕರೆಸಿ ನೀವು ವಿಚಾರಣೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆ ಎಂದು ಹೇಳಿದರೆ ಸಿಬಿಐ ಎನ್‌ಕ್ವಯರಿಯಲ್ಲಿ ನಾವು ಇಂಟರ್‌ಪಿಯರೆನ್ಸ್ ಮಾಡುವು-ದಕ್ಕಾಗುವುದಿಲ್ಲ. It is for the CBI to decide. ಅದರಿಂದ ಮಾನ್ಯ ಅಧ್ಯಕ್ಷರೆ, ನನ್ನ ಅಭಿಪ್ರಾಯದಲ್ಲಿ ಇವತ್ತು ತಾವು ಶೂನ್ಯ ವೇಳೆಯಲ್ಲಿ ತಾವು ಪ್ರಸ್ತಾಪ ಮಾಡುವ ಬಗ್ಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಆಯಿತು. ತಮ್ಮ ಒಂದು ತೀರ್ಮಾನ ಏನಿದೆ, ಆ ತೀರ್ಮಾನ ತಮಗೆ ಬಿಟ್ಟಿರುವುದಾಗಿದೆ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದನ್ನು ನಿಲುವಳಿ ಸೂಚನೆಯ ರೂಪದಲ್ಲಿ ಅಥವಾ ಮತ್ತೊಂದು ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುವುದು. ಮತ್ತೊಂದು ಬಹಳ ಪ್ರಮುಖವಾದುದು ಈ ಸದನದಲ್ಲಿ ನಾಲ್ಕು ದಿನಗಳ ಹಿಂದೆ ಈ ಬಗ್ಗೆ ಚರ್ಚೆಯಾಗಿದೆ. ಹೊಸ ಅಂಶಗಳು ಏನೂ ಸಹಿತ ಇರುವುದಿಲ್ಲ ಆದ್ದರಿಂದ ಕಾನೂನಿನ ಪುಸ್ತಕದಲ್ಲಿ ಇದಕ್ಕೆ ಅವಕಾಶವಿಲ್ಲ ನಿಯಮಾವಳಿಗಳ ಪ್ರಕಾರ ಎಂದು ನಾನ ತಮ್ಮ ಗಮನಕ್ಕೆ ಸರ್ಕಾರದ ಪರವಾಗಿ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಡಲಿ. ಅನಂತರ ಅದನ್ನು ಕನ್ಸಿಡರ್ ಮಾಡೋಣ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.